ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	472
ಸದಸ್ಯರ ಹೆಸರು	:	ಶ್ರೀ ಪ್ರಸನ್ನಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	:	24.09.2020
ಉತ್ತರಿಸುವ ಸಚಿವರು	:	ಮಾನ್ಯ ಜಲಸಂಪನ್ಮೂಲ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿರುವ ಒಟ್ಟು ಬೃಹತ್ ಮತ್ತು ಮಧ್ಯಮ ಜಲಾಶಯಗಳೆಷ್ಟು; (ಜಿಲ್ಲಾವಾರು ಜಲಾಶಯಗಳ ಮಾಹಿತಿ ನೀಡುವುದು)	ವಿವರಗಳನ್ನು ಅನುಬಂಧ -1 ರಲ್ಲಿ ನೀಡಲಾಗಿದೆ.
ಆ)	ರಾಜ್ಯದಲ್ಲಿರುವ ಜಲಾಶಯಗಳನ್ನು ಯಾವಾಗ ನಿರ್ಮಿಸಲಾಗಿದೆ; ಮತ್ತು ಅವುಗಳು ಎಷ್ಟು ನೀರಿನ ಸಂಗ್ರಹ ಸಾಮರ್ಥ್ಯ ಹೊಂದಿವೆ;	
ಇ)	ಜಲಾಶಯಗಳಲ್ಲಿ ಇಲ್ಲಿಯವರೆಗೆ ಎಷ್ಟು ಬಾರಿ ಹೂಳನ್ನು ತೆಗೆಯಲಾಗಿದೆ; ಹೂಳು ತುಂಬಿರುವುದರಿಂದ ನೀರಿನ ಸಂಗ್ರಹ ಸಮರ್ಪಕ ಬಳಕೆಗೆ ಧಕ್ಕೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ತುಂಗಭದ್ರಾ ಹಾಗೂ ಹಾರಂಗಿ ಜಲಾಶಯಗಳಲ್ಲಿನ ಪ್ರಸ್ತಾವನೆಗಳು ಪರಿಶೀಲನಾ ಹಂತದಲ್ಲಿರುತ್ತದೆ. ಇನ್ನುಳಿದ ಜಲಾಶಯಗಳಲ್ಲಿ ಜಲಾಶಯ ನಿರ್ಮಾಣವಾದಗಿನಿಂದ ಇಲ್ಲಿಯವರೆಗೆ ಹೂಳಿನ ಸಂಗ್ರಹಣಾ ಪ್ರಮಾಣವು ಒಟ್ಟಾರೆ ಜಲಾಶಯದ ಪ್ರಮಾಣಕ್ಕೆ ಹೋಲಿಸಿದಾಗ ಗಣನೀಯವಾಗಿ ಕಡಿಮೆ ಇರುವ ಹಿನ್ನೆಲೆಯಲ್ಲಿ ಹೂಳೆತ್ತುವ ಪ್ರಮೇಯ ಉದ್ಭವಿಸುವುದಿಲ್ಲ. ಆದಾಗ್ಯೂ ಪ್ರತಿ ಸಾಲಿನ ಪ್ರವಾಹದ ಒಳಹರಿವಿನ ಸಂದರ್ಭದಲ್ಲಿ ಅಣೆಕಟ್ಟಿನ River sluice ಅನ್ನು ಉಪಯೋಗಿಸಿ ಹಾಗೂ ಜಲಾನಯನ ಪ್ರದೇಶ ಅಭಿವೃದ್ಧಿ ಯೋಜನೆಗಳ ಅನುಷ್ಠಾನದ ಮುಖೇನ ಹೂಳಿನ ಮಟ್ಟವನ್ನು ನಿಯಂತ್ರಣಗೊಳಿಸಲಾಗುತ್ತಿದೆ.
ಈ)	ಜಲಾಶಯಗಳಲ್ಲಿ ಹೂಳು ತೆಗೆಯಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು;	
ಉ)	ಹೊಸ ಜಲಾಶಯಗಳನ್ನು ನಿರ್ಮಾಣ ಮಾಡುವ ಉದ್ದೇಶ ಸರ್ಕಾರಕ್ಕಿದೆಯೆ? (ವಿವರ ನೀಡುವುದು)	ವಿವರಗಳನ್ನು ಅನುಬಂಧ- 2 ರಲ್ಲಿ ನೀಡಲಾಗಿದೆ.

ಜಸಂಇ: 115 ಎಂಎಲ್‌ಎ 2020

(ರಮೇಶ್ ಲ.ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು.

ಅನುಬಂಧ

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 472 ಕ್ಕೆ ಉತ್ತರಗಳು

ಕ್ರ.ಸಂ.	ಅಣೆಕಟ್ಟು	ಜಿಲ್ಲೆ	ನಿರ್ಮಿಸಲಾದ ವರ್ಷ	ನೀರಿನ ಸಂಗ್ರಹಣಾ ಸಾಮರ್ಥ್ಯ (ಟಿ.ಎಂ.ಸಿ ಗಳಲ್ಲಿ)
1	ಆಲಮಟ್ಟಿ	ಬಿಜಾಪುರ	2001	123.08
2	ನಾರಾಯಣಪುರ	ಯಾದಗಿರಿ, ರಾಯಚೂರು, ಬಿಜಾಪುರ	1982	37.76
3	ಹಿಡಕಲ್	ಬೆಳಗಾವಿ	1978	51.00
4	ಮಾರ್ಕಂಡೇಯ	ಬೆಳಗಾವಿ	2006	3.70
5	ಬಳ್ಳಾರಿ	ಬೆಳಗಾವಿ	ಕಾಮಗಾರಿ ಪ್ರಗತಿಯಲ್ಲಿದೆ	1.34
6	ಹಿಪ್ಪರಗಿ ಬ್ಯಾರೇಜ್	ಬೆಳಗಾವಿ	2004	6.00
7	ಕಿಣಯೇ	ಬೆಳಗಾವಿ	ಕಾಮಗಾರಿ ಪ್ರಗತಿಯಲ್ಲಿದೆ	0.15
8	ಮಲಪ್ರಭಾ	ಬೆಳಗಾವಿ	1973	37.73
9	ಹರಿನಾಲಾ	ಬೆಳಗಾವಿ	2004	0.49
10	ಭದ್ರಾ	ಚಿಕ್ಕಮಗಳೂರು	1965	71.50
11	ತುಂಗಾ ಮೇಲ್ದಂಡೆ	ಶಿವಮೊಗ್ಗ	2004	3.24
12	ಅಂಬ್ಲಿಗೋಳ	ಶಿವಮೊಗ್ಗ	1965	0.62
13	ಅಂಜನಾಪುರ	ಶಿವಮೊಗ್ಗ	1930	1.79
14	ಧರ್ಮಾ	ಉತ್ತರ ಕನ್ನಡ	1964	0.81
15	ಭದ್ರಾ ಅಣೆಕಟ್ಟು (ಗೋಂದಿ)	ಶಿವಮೊಗ್ಗ	1923	0.37
16	ಜಂಬದಹಳ್ಳ	ಚಿಕ್ಕಮಗಳೂರು	1958	0.34
17	ಶಾಂತಿಸಾಗರ ಕೆರೆ	ದಾವಣಗೆರೆ	ಅಣೆಕಟ್ಟನ್ನು ಸ್ವಾತಂತ್ರ್ಯ ಪೂರ್ವದಲ್ಲಿ ನಿರ್ಮಿಸಿದ್ದು, ನಿರ್ಮಾಣಗೊಂಡ ವರ್ಷದ ಮಾಹಿತಿ ಲಭ್ಯವಿರುವುದಿಲ್ಲ	2.61
18	ಭೀಮಾ ಏನೀಯೋ	ಕಲಬುರಗಿ	2010	3.17
19	ಬೆಣ್ಣೆತೋರಾ	ಕಲಬುರಗಿ	2001	5.30
20	ಅಮರ್ಜಾ	ಕಲಬುರಗಿ	2001	1.55
21	ಕೆಳದಂಡೆ ಮುಲ್ಲಾಮಾರಿ	ಕಲಬುರಗಿ	2001	1.74
22	ಗಂಡೋರಿ ನಾಲಾ	ಕಲಬುರಗಿ	2003	1.89
23	ಚಂದ್ರಂಪಳ್ಳಿ	ಕಲಬುರಗಿ	1975	1.21
24	ಕಾರಂಜಾ	ಬೀದರ್	1990	7.69
25	ಚುಳಕಿನಾಲಾ	ಬೀದರ್	1998	0.94
26	ಮೇಲ್ದಂಡೆ ಮುಲ್ಲಾಮಾರಿ	ಬೀದರ್	1985	0.75
27	ಹತ್ತಿಕುಣಿ	ಯಾದಗಿರಿ	1975	0.35

ಕ್ರ.ಸಂ.	ಅಣೆಕಟ್ಟು	ಜಿಲ್ಲೆ	ನಿರ್ಮಿಸಲಾದ ವರ್ಷ	ನೀರಿನ ಸಂಗ್ರಹಣಾ ಸಾಮರ್ಥ್ಯ (ಟಿ.ಎಂ.ಸಿ ಗಳಲ್ಲಿ)
28	ಸೌದಾಗರ	ಯಾದಗಿರಿ	1983	0.29
29	ತುಂಗಭದ್ರಾ	ಕೊಪ್ಪಳ	1952	132.47
30	ಸಿಂಗಟಾಲೂರು ಏನೀಯೋ	ಗದಗ	ಕಾಮಗಾರಿ ಪ್ರಗತಿಯಲ್ಲಿದೆ	3.12
31	ಹಿರೇಹಳ್ಳ	ಕೊಪ್ಪಳ	2001	1.79
32	ಹಗರಿಬೊಮ್ಮನಹಳ್ಳಿ	ಬಳ್ಳಾರಿ	1972	2.27
33	ಕೃಷ್ಣರಾಜಸಾಗರ	ಮೈಸೂರು	1931	49.45
34	ಕಬಿನಿ		1979	19.52
35	ನುಗು		1949	5.44
36	ತಾರಕ		1979	3.94
37	ಹಾರಂಗಿ	ಕೊಡಗು	1980	8.50
38	ಚಿಕ್ಲಿಹೊಳೆ		1986	0.18
39	ಹೇಮಾವತಿ	ಹಾಸನ	1980	37.10
40	ಯಗಚಿ		2002	3.60
41	ವಾಟೆಹೊಳೆ		1982	1.51
42	ಗುಂಡಾಲ್	ಚಾಮರಾಜನಗರ	1980	0.97
43	ಸುವರ್ಣಾವತಿ		1984	1.27
44	ಉಡುತೊರೆಹಳ್ಳ		2008	0.67
45	ಚಿಕ್ಕಹೊಳೆ		1969	0.38
46	ನಲ್ಲೂರು ಅಮಾನಿಕೆರೆ		1987	0.23
47	ಹೆಬ್ಬಳ್ಳ		1972	0.34
48	ಮಂಚನಬೆಲೆ	ರಾಮನಗರ	1986	1.22
49	ಇಗ್ಗಲೂರು		1985	0.18
50	ಅರ್ಕಾವತಿ		1986	1.58
51	ಕಣ್ವ		1946	0.84
52	ಮಾರ್ಕೋನಹಳ್ಳಿ	ತುಮಕೂರು	1941	2.40
53	ಮಂಗಳ		1970	0.53
54	ತೀತಾ		1986	0.24
55	ವಾಣಿವಿಲಾಸ ಸಾಗರ	ಚಿತ್ರದುರ್ಗ	1907	30
56	ಗಾಯತ್ರಿ ಜಲಾಶಯ	ಚಿತ್ರದುರ್ಗ	1963	0.97

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಪ್ರಸನ್ನಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುತಿಲ್ಲದ ಪ್ರಶ್ನೆ ಸಂಖ್ಯೆ: 523 ಗೆ ಮಾಹಿತಿಗಳು

ಅನುಬಂಧ-2

1) ಬೆಳಗಾವಿ ಜಿಲ್ಲೆಯ ಗೋಕಾಕ ವಿಧಾನಸಭಾ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಗೋಕಾಕ ಪಟ್ಟಣದ ಹತ್ತಿರ (ಯೋಗಿಕೊಳ್ಳದ ಹತ್ತಿರ) ಹರಿಯುವ ಮಾರ್ಕಂಡೇಯಾ ನದಿಗೆ ಅಡ್ಡಲಾಗಿ ಡ್ಯಾಂ ನಿರ್ಮಿಸಿ ಗೋಕಾಕ ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ಯೋಜನೆಯನ್ನು (ಘಟ್ಟಿ ಬಸವಣ್ಣ ಡ್ಯಾಂ) ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ. ಸದರಿ ಯೋಜನೆಯ ಡಿಪಿಆರ್ ನ್ನು ತಯಾರಿಸಲಾಗಿದ್ದು, ಪರಿಶೀಲನಾ ಹಂತದಲ್ಲಿದೆ.

2) ತುಂಗಭದ್ರಾ ಜಲಾಶಯದಲ್ಲಿತುಂಬಿರುವ 31.616 ಟಿ.ಎಂ.ಸಿ ಹೂಳಿನಿಂದ ಉಂಟಾಗಿರುವ ಜಲಾಶಯದ ಸಾಮರ್ಥ್ಯವನ್ನು ಮರು ಭರಿಸಲು ನವಲಿ ಗ್ರಾಮದ ಹತ್ತಿರ ಸಮನಾಂತರ ಜಲಾಶಯ ನಿರ್ಮಿಸಲು ಯೋಜಿಸಲಾಗಿದ್ದು, ಡಿಪಿಆರ್ ತಯಾರಿಸಲು ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ.

3) ಮೇಕೆದಾಟು ಬಳಿ ಸಮತೋಲನ ಜಲಾಶಯವನ್ನು (balancing reservoir) ನಿರ್ಮಿಸಲು ಉದ್ದೇಶಿಸಲಾಗಿದೆ. ಸದರಿ ಕುಡಿಯುವ ನೀರಿನ ಯೋಜನೆಯನ್ನು ರಾಜ್ಯ ಸರ್ಕಾರವೂ ಅನುಷ್ಠಾನಗೊಳಿಸುವ ಸಲುವಾಗಿ ವಿವರವಾದ ಯೋಜನಾ ವರದಿಯನ್ನು ರೂ.9000.00 ಕೋಟಿ ಮೊತ್ತಕ್ಕೆ ತಯಾರಿಸಿ ಕೇಂದ್ರ ಜಲ ಆಯೋಗ, ನವದೆಹಲಿಗೆ ಸಲ್ಲಿಸಲಾಗಿರುತ್ತದೆ. ಮೇಕೆದಾಟು ಯೋಜನೆಯ ವರದಿಯನ್ನು ಕೇಂದ್ರ ಜಲ ಆಯೋಗದ ವಿವಿಧ ನಿರ್ದೇಶನಾಲಯಗಳಲ್ಲಿ ಪರಿಶೀಲನೆಯಲ್ಲಿದ್ದು, ಕೇಂದ್ರ ಜಲ ನಿರ್ವಹಣಾ ಪ್ರಾಧಿಕಾರ (CWMA)ದ ಸಭೆಗಳಲ್ಲಿ ಸದರಿ ವಿಷಯವು ಚರ್ಚೆಗೆ ಒಳಪಟ್ಟಿದ್ದು ಮುಂದೂಡಲ್ಪಟ್ಟಿರುತ್ತದೆ. ಯೋಜನೆಗೆ ಎಲ್ಲಾ ಶಾಸನಬದ್ಧ ಅನುಮೋದನೆಗಳು ದೊರೆತ ನಂತರ ಅನುಷ್ಠಾನಗೊಳಿಸಲು ಕ್ರಮ ವಹಿಸಲಾಗುವುದು.